# ಕಲೆಯ ಬಿಂಬ ಈ ದೀಪಸ್ತಂಭ

ವಿವಿಧ ಕಾರ್ಯಕ್ರಮಗಳನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸುವಾಗ ಆ ದೀಪಸ್ತಂಭವನ್ನು ಅತಿಯಾಗಿ ಅಲಂಕಾರ ಮಾಡಿ, ಹೂಗಳಿಂದ ವಿಪರೀತವಾಗಿ ಸುತ್ತಿರುವುದನ್ನು ಕಂಡಿದ್ದೇವೆ. ಇದರ ಬದಲಾಗಿ ಕಲಾವಿದರಾದ ಭೀಮೇಶಪ್ಪ ಇವರು ತಮ್ಮದೇ ಶೈಲಿಯ ದೀಪಸ್ತಂಭ ಮಾಡಿದ್ದಾರೆ. ಥರ್ಮಕೋಲ್, ಬಟ್ಟೆಯಿಂದ ತಯಾರಿಸಿದ ದೀಪಸ್ತಂಭಕ್ಕೆ ಹಸೆ ಕಲೆಯಲ್ಲಿ ಬಣ್ಣ ಹಚ್ಚಿದ್ದಾರೆ. ರಾಯಚೂರಿನ ಮಾನ್ವಿ ತಾಲೂಕಿನ ಹಿರೆಕೋಟ್ನೆಕಲ್‌ನವರಾದ ಇವರು ತಯಾರಿಸಿದ ಈ ದೀಪಸ್ತಂಭ ಕಾರ್ಯಕ್ರಮಗಳಲ್ಲಿ ಹಲವರ ಮನ ಗೆದ್ದಿದೆ.

**-ಈರಣ್ಣ ಬೆಂಗಾಲಿ, ರಾಯಚೂರು**



# ಫಾತಿಮಾಳ ಮಾರ್ಜಾಲ ಸೇವೆ



ಬಳ್ಳಾರಿಯ ಕೋಟೆ ಪ್ರದೇಶದ ರಸ್ತೆ ಬದಿಯಲ್ಲಿ ಹಾವೇರಿ ಮೂಲದ ಫಾತಿಮಾಗೆ ಬಡತನ ಹಾಸಿ, ಹೊದಿಸಿಕೊಳ್ಳುವಷ್ಟಿದ್ದರೂ ಒಂದಲ್ಲಾ ಎರಡಲ್ಲಾ ಸರಿ ಸುಮಾರು 20 ಬೆಕ್ಕಿನ ಮರಿಗಳನ್ನು ಸಲಹುತ್ತಿದ್ದಾಳೆ.

ಯಾರಾದರು ಮಾತನಾಡಿಸಿದರೂ ಸರಿಯಾಗಿ ಪ್ರತಿಕ್ರಿಯಿಸುವುದಿಲ್ಲ. ಈ ಮಹಿಳೆ ಸಮೀಪದ ಮುಸ್ಲಿಂ ಹಾಸ್ಟೆಲ್ ವಾಚ್‌ಮನ್ ಶೇಖ್ ಸಾಬ್ ಪ್ರಕಾರ ಫಾತಿಮಾ ಗಂಡ ದಾವೂದ್ ಸಾಬ್ ದೈವಾಧೀನರಾಗಿದ್ದಾರೆ. ಸರಿಯಾದ ನೆಲೆ ಇಲ್ಲದೇ, ರಸ್ತೆ ಬದಿಯಲ್ಲೆ ಪುಟ್ಟ ಪುಟ್ಟ ಬೆಕ್ಕುಗಳೊಂದಿಗೆ ಬದುಕುತ್ತಿರುವುದನ್ನು ಕಂಡ ದಾನಿಯೊಬ್ಬರು ಮಳೆ, ಗಾಳಿ ಸುರಕ್ಷತೆಗೆ ತಗಡಿನ ಶೆಡ್ ಹಾಕಿ ಕೊಟ್ಟಿದ್ದಾರೆ. ಹಾದು ಹೋಗುವ ಜನ ಧನ ಸಹಾಯ ಮಾಡುತ್ತಾರೆ. ಕೆಲವರು ಹಣ ಕೊಟ್ಟು ಬೆಕ್ಕಿನ ಮರಿಗಳನ್ನು ಸಾಕಲು ಒಯ್ಯುತ್ತಾರೆ. ಆಕೆಯ ಬಳಿ ಇರುವ ಮರಿ ಬೆಕ್ಕುಗಳು ಬೆಳೆದು ದೊಡ್ಡದಾದಾಗ ಅಲೆಮಾರಿಗಳಾಗಿ ಅವರಿವರ ಮನೆ ಸೇರುಕೊಳ್ಳುತ್ತವೆ. ಪುಟ್ಟ ಮರಿಗಳನ್ನು ಸಾಕಲಾಗದವರು ಫಾತಿಮಾಗೆ ಸಾಕಲು ನೀಡಿ ಧನ ಸಹಾಯ ಮಾಡುತ್ತಾರೆ.

**-ರಘುನಾಥರಾವ್ ತಾಪ್ಸೆ, ದಾವಣಗೆರೆ**

# ಮನಸೆಳೆಯುವ ಒಂಟೆ ರೇಸ್

ಪಾಕಿಸ್ತಾನ, ಸೌದಿ ಅರೇಬಿಯಾ, ಈಜಿಪ್ಟ್, ಬಹರೇನ್ ಮತ್ತು ಕತಾರ್‌ಗಳಲ್ಲಿ ಒಂಟೆ ರೇಸ್ ಒಂದು ಜನಪ್ರಿಯ ಕ್ರೀಡೆ. ಮರುಭೂಮಿಯೇ ಹೆಚ್ಚಾಗಿರುವ ಪಶ್ಚಿಮ ಏಷ್ಯಾ ಮತ್ತು ಆಫ್ರಿಕಾ ಪ್ರಾಂತ್ಯಗಳಲ್ಲಿ ಓಟದ ಸ್ಪರ್ಧೆ ಸಲುವಾಗಿಯೇ ಒಂಟೆಗಳನ್ನು ವಿಶೇಷ ಕಾಳಜಿಯಿಂದ ಸಾಕುತ್ತಾರೆ. ಅದಕ್ಕಾಗಿ ಉತ್ತಮ ಪೌಷ್ಟಿಕ ಆಹಾರ ಮತ್ತು ತರಬೇತಿ ನೀಡಲಾಗುತ್ತದೆ. ಈ ಒಂಟೆಗಳು ಗಂಟೆಗೆ ಸುಮಾರು 32–40 ಕಿ.ಮೀ. ವೇಗದಲ್ಲಿ ಓಡಬಲ್ಲವು. ಒಂಟೆಯ ಡುಬ್ಬಕ್ಕೆ ರೊಬಾಟಿಕ್ ಚಾಟಿಯನ್ನು ಅಳವಡಿಸಿ, ರಿಮೋಟ್ ಕಂಟ್ರೋಲ್ ಮೂಲಕ ನಿಯಂತ್ರಿಸುತ್ತಾರೆ. ಚಾಟಿ ಏಟು ಬಿದ್ದಷ್ಟೂ ನಾಗಾಲೋಟದಲ್ಲಿ ಓಡುವ ಒಂಟೆಗಳನ್ನು ನೋಡುವುದೇ ಚೆಂದ.

ಓಟದ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ನೆಚ್ಚಿನ ಒಂಟೆಯ ಮೇಲೆ ಹಣ ಹಾಕಿ ಬಾಜಿ ಕಟ್ಟಬಹುದು. ಒಂಟೆಗಳ ಮೇಲೆ ಲಕ್ಷದಿಂದ ಕೋಟಿವರೆಗೆ ಬಾಜಿ ಕಟ್ಟಿರುತ್ತಾರೆ. ಗೆಲ್ಲುವ ಒಂಟೆಗೆ ಹೆಚ್ಚು ಬೇಡಿಕೆ. ಸ್ಪರ್ಧೆಯಲ್ಲಿ ವಿಜೇತರಾದ ಒಂಟೆ ಮಾಲೀಕರಿಗೆ ದೊಡ್ಡ ಮೊತ್ತದ ನಗದು ಬಹುಮಾನ ಕೊಡುತ್ತಾರೆ. ಒಂಟೆಯ ಓಟದ ಸ್ಪರ್ಧೆ ವಿಶ್ವದಾದ್ಯಂತ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ.

**-ಉಮಾ ಶಿವಶಂಕರ್, ಶಿವಮೊಗ್ಗ**

